

ಲೋನ್ಲಿಂಗ ಎಂಬ ಹೆಸರೇ ಶಾಶ್ವತವಾಗಿ ಉಳಿದುಬಿಟ್ಟಿತ್ತು. ಇಂಥ ಲೋನ್ಲಿಂಗ ಎರಡಂತಸ್ತಿನ ಮನೆ, ಕಾರು ಹೊಂದಿದ್ದರೂ ಸೈಕಲ್ಲಲ್ಲಿ ಓಡಾಡುತ್ತಿದ್ದ.

ಚಿಕ್ಕಮ್ಮನು ಇದುವರೆಗೆ ಯಾವ ಬ್ಯಾಂಕ್ ಹತ್ತಿರವೂ ಸುಳಿದವಳಲ್ಲ. ಯಾವ ಸಬ್ಸಿಡಿ ಸಾಲ ಪಡೆದವಳಲ್ಲ. ಅಷ್ಟೇ ಅಲ್ಲ, ಅವಳು ಯಾವುದೇ ಬ್ಯಾಂಕ್ ಖಾತೆಯನ್ನೂ ಸಹ ಹೊಂದಿರಲಿಲ್ಲ. ಚಿಕ್ಕಮ್ಮ ಮತ್ತು ಲೋಕಿ ಉಳ್ಳವರ ಹೊಲ ತೋಟ ಮನೆಗಳಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದರು. ಚಿಕ್ಕಮ್ಮ ಒಬ್ಬಿಬ್ಬರು ಆಫೀಸರುಗಳ ಮನೆಯಲ್ಲಿ ಬಟ್ಟೆ ಕಸ ಮುಸುರೆ ಕೆಲಸವನ್ನು ಮಾಡುತ್ತಿದ್ದಳು.